| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 1247/2023**

ಪಿಡ್ಲ್ಯೂಃ 2 ಸಿಡ್ಲ್ಯೂಃ 2

ಸಾಕ್ಷಿದಾರನ ಹೆಸರು : ಶೈಲೇಶ್ ಪೂಜಾರಿ
ತಂದೆಯ ಹೆಸರು : ಷಣ್ಮುಗ
ಪ್ರಾಯ : 32 ವರ್ಷ
ಉದ್ಯೋಗ : ಕೂಲಿ
ವಾಸ : ಕುಂಟಾಡಿ

ದಿನಾಂಕ 04.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

1 ನೇ ಆರೋಪಿಯನ್ನು ನೋಡಿದ್ದೇನೆ. 2 ನೇ ಆರೋಪಿಯನ್ನು ನೋಡಿರುವುದಿಲ್ಲ.

ಚಾಸಾ-1 ನನ್ನ ತಾಯಿ, ಚಾಸಾ-3 ಹೆಂಡತಿ, ಚಾಸಾ-4 ಮತ್ತು 5 ನೆರೆಕರೆಯವರು.

2. 5 ವರ್ಷದ ಹಿಂದೆ ನಾನು ನನ್ನ ಹೆಂಡತಿಯನ್ನು ಬೆಳ್ಮಣ್ ನಿಂದ ಮನೆಗೆ ಕರೆದುಕೊಂಡು ಬರಲು ಹೋಗಿದ್ದೆ. ಸುಮಾರು ಮಧಾಹ್ನ ಊಟದ ಹೊತ್ತಿಗೆ ಮನೆಗೆ ಹಿಂದಿರುಗಿರುತ್ತೇವೆ. ಚಾಸಾ-1 ರವರು ಮನೆಯ ಬಾಗಿಲಿನ ಚಿಲಕ ಮುರಿದು ಬಿದ್ದ ಬಗ್ಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-3 ರವರು ನಮ್ಮ ಕೋಣೆಯ ಒಳಗೆ ಹೋಗಿ ನೋಡಿದಾಗ ಕಪಾಟಿನಲ್ಲಿದ್ದ ಚಿನ್ನಾಭರಣ ಕಳುವಾಗಿತ್ತು. ಒಂದು ಚಿನ್ನದ ಹಾರ, ಒಂದು ಕೈ ಬಳೆ , ಕಿವಿ ಬೆಂಡೊಲೆ, ಮಗುವಿನ ಉಂಗುರ, ಕರಿಮಣಿ ಸರ ಮತ್ತು ಬಂಗಾರದ ಉಂಗುರ

ಕಳುವಾಗಿತ್ತು. ದೂರು ನೀಡುವ ಸಮಯದಲ್ಲಿ ಮತ್ತೊಂದು ಮಗುವಿನ ಸರವನ್ನು ನಮೂದಿಸಲು ತಪ್ಪಿ ಹೋಗಿತ್ತು. ನಮ್ಮ ಮನೆಯಲ್ಲಿ ಕಳ್ಳತನ ಸುಮಾರು ಬೆಳಿಗ್ಗೆ 11.00 ರಿಂದ 12.00 ಗಂಟೆಯ ಒಳಗೆ ಆಗಿತ್ತು. ಕಳ್ಳತನವಾದ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ.

ಅದೇ ದಿನ ಸಂಜೆ ಪೊಲೀಸರು ನಮ್ಮ ಮನೆಗೆ ಬಂದು ತನಿಖೆ ಮಾಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯನ್ನು ಪೊಲೀಸರು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಆರೋಪಿಯನ್ನು ವಿಚಾರಣೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಆರೋಪಿಯನ್ನು ಮನೆಗೆ ಕರೆದುಕೊಂಡು ಬಂದಾಗ ನಾವು ಮನೆಯಲ್ಲಿ ಇರಲಿಲ್ಲ. ಪೊಲೀಸರು ನಮ್ಮ ಮನೆಯಿಂದ ಕಳುವಾದ ಚಿನ್ನಾಭರಣವನ್ನು ಸ್ವಾಧಿನಪಡಿಸಿಕೊಂಡಿರುವುದನ್ನು ನಮಗೆ ತೋರಿಸಿರುವುದಿಲ್ಲ. ಈಗ ನಾನು ನೋಡಿದ ಭಾವಚಿತ್ರದಲ್ಲಿ ಇರುವ ಚಿನ್ನಾಭರಣಗಳು ನಮ್ಮದಲ್ಲ. ಮು ಮಾ-1 ಮತ್ತು 2 ನ್ನು ನೋಡಿ ಗುರುತಿಸಿದ್ದೇನೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಮತ್ತು ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

5. ಈ ಪ್ರಕರಣ ಪತ್ತೆಯಾಗದಪ್ರಕರಣ ಎಂದು ದಾಖಲಾದ ನಂತರ 1 ನೇ ಆರೋಪಿಯನ್ನು ಸ್ಥಳ ಮಹಜರಿಗೆ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ದಿಃ20.07.2021 ರಂದು ಬೆಳಿಗ್ಗೆ 11.00 ಗಂಟೆಗೆ ನಮ್ಮ ಮನೆಗೆ ಬಂದು 1 ನೇ ಆರೋಪಿ ಮನೆಯಲ್ಲಿದ್ದ ಕೆಲವು ಚಿನ್ನಾಭರಣಗಳನ್ನು ಕಳುವು ಮಾಡಿ ಬೆಂಗಳೂರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. ಮಾರಾಟ ಮಾಡಿ ಬಂದ ಹಣ ಒಂದು ಲಕ್ಷ ವನ್ನು 1 ಮತ್ತು 2 ನೇ

ಅರೋಪಿಗಳು ಹಂಚಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ಮನೆಯ ಬಾಗಿಲಿನ ಚಿಲಕವನ್ನು ತೆಗೆಯಲು ಬಳಸಿದ ರಾಡನ್ನು ಮಂಗಳೂರಿನ ಸಿಸಿಬಿ ಪೊಲೀಸರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಈಗ ನಾನು ನೋಡಿದ ಭಾವಚಿತ್ರ ದಲ್ಲಿ ಕಂಡು ಬರುವ ಚಿನ್ನಾಭರಣಗಳನ್ನು ಪೊಲೀಸರು ನನಗೆ ತೋರಿಸಿದ್ದಾರೆ ಎಂದರೆ ಸರಿ. ಆದರೆ ಅದು ನಮ್ಮ ಚಿನ್ನಾಭರಣಗಳು ಅಲ್ಲ. ಪೊಲೀಸರು ದಿಃ05.05.2023 ಮತ್ತು ದಿಃ19.05.2023 ರಂದು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-4 ಎಂದು ಮತ್ತು ಮರುಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀಮತಿ ವಿ ಟಿ ಬಿ ವಕೀಲರಿಂದಃ

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ ಎಂಂದರೆ ಸರಿಯಲ್ಲ. ಈ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಈ ಘಟನೆಗೆ ಸಂಬಂಧಿಸಿದ್ದವರು ಅಲ್ಲ ಎಂದರೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಈ ಪ್ರಕರಣಕ್ಕೆ ಸಂಬಧಿಸಿದ್ದಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ನಾನು ಸಂಬಂಧಿಸಿರುವುದಿಲ್ಲ ಆದರೂ ನನ್ನನ್ನು ಸಾಕ್ಷಿದಾರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ